**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 1868/ 2024**

**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | ರಾಜಮ್ಮ |
| ಗಂಡನ ಹೆಸರು | ರಂಗಯ್ಯ |
| ವಯಸ್ಸು | 71 |
| ಉದ್ಯೋಗ | ವ್ಯವಸಾಯ |
| ವಿಳಾಸ | ದಂಡಿಗೆಪುರ |

**ದಿನಾಂಕಃ 06.09.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 2 ರಿಂದ 5 ರವರು ಪರಿಚಯ ಇರುತ್ತಾರೆ. ಆರೋಪಿಗಳು ಪರಿಚಯ ಇರುತ್ತಾರೆ. ನಮ್ಮ ಜಮೀನಿನಲ್ಲಿ ಮರಗಳು ಇದ್ದವು. ಅದನ್ನು ಕಲ್ಲಯ್ಯನ ಮಗ ಬಸವರಾಜ ರವರು ಸದರಿ ಮರಗಳನ್ನು ಖರೀದಿ ಮಾಡಿದ್ದರು. 20 ದಿನ ಮೇಲಾದರೂ ಹಣವನ್ನು ಕೊಟ್ಟಿದ್ದಿರಲಿಲ್ಲ. ಸದರಿ ಮರಗಳನ್ನು ಕೊಡಿಸಿದ ದಳ್ಳಾಳಿಗಳನ್ನು 2-3 ಭಾರಿ ಹುಡುಕಿದರೂ ಸಿಕ್ಕಿದ್ದಿರಲಿಲ್ಲ. ನಂತರ ನಾನು ನನ್ನ ಮನೆಗೆ ಬಂದು ಸದರಿ ಮರಗಳನ್ನು ಪುಕ್ಕಟೆಗೆ ಕೊಟ್ಟಿರುವುದಿಲ್ಲ ಎಂದು ನನ್ನ ಪಾಡಿಗೆ ನಾನು ಜಗತಿಯ ಮೇಲೆ ಕೂತಿದ್ದೆನು. ದಿನಾಂಕ 29.01.2024 ರಂದು ಆರೋಪಿಗಳು ಒಂದು ಕಬ್ಬಿಣದ ರಾಡನ್ನು ತಂದರು ನಾನು ಏನೋ ಇರಬಹುದು ಎಂದು ಸುಮ್ಮನೆ ಇದ್ದೆನು. 1ನೇ ಆರೋಪಿಯು ದೊಣ್ಣೆಯಿಂದ ನನ್ನ ಮೈಕೈಗೆ ಹಲ್ಲೆ ಮಾಡಿರುತ್ತಾನೆ. 2ನೇ ಆರೋಪಿಯು ಕಬ್ಬಿಣದ ರಾಡಿನಿಂದ ಹೊಟ್ಟೆ ಮೇಲೆ ಹಾಗೂ ಮಂಡಿ ಮೇಲೆ ಹಲ್ಲೆ ಮಾಡಿರುತ್ತಾರೆ. ಆಗ ಚಾಸಾ 2,3 ಮತ್ತು 5 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಚಾಸಾ 2 ರವರು ನನ್ನ ಮಗನಾದ ಚಾಸಾ 4

ರವರಿಗೆ ಪೋನ್ ಮಾಡಿದಾಗ ಚಾಸಾ 4ರವರು ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಡ್ಮಿಟ್ ಮಾಡಿರುತ್ತಾರೆ. ಪೋಲಿಸರು ಬಂದು ಹೇಳಿಕೆಯನ್ನು ಪಡೆದಿರುತ್ತಾರೆ. ಈಗ ಸಾಕ್ಷಿಗೆ ಹೇಳಿಕೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರನ್ನು ಕೊಟ್ಟ ನಂತರ ಪೋಲಿಸರು ಮಹಜರನ್ನು ಜರುಗಿಸಲು ಪೆಬ್ರುವರಿ 22 ರಂದು ಚಾಸಾ 2 ಮತ್ತು 5 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಸಹಿಯನ್ನು ಪಡೆದಿರುತ್ತಾರೆ. ಈಗ ಸಾಕ್ಷಿಗೆ ಕೃತ್ಯ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ದೊಣ್ಣೆ ಮತು ರಾಡನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಸದರಿ ದೊಣ್ಣೆ ಮತ್ತು ರಾಡನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ನ್ಯಾಯಾಲಯದಲ್ಲಿರುವ ದೊಣ್ಣೆ ಮತ್ತು ರಾಡನ್ನು ತೋರಿಸಲಾಗಿ ಸಾಕ್ಷಿ ಸದರಿ ದೊಣ್ಣೆ ಮತ್ತು ರಾಡು ಇದಲ್ಲ ಎಂದು ನುಡಿಯುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಆರೋಪಿಗಳ ಗುರುತಿಸುವಿಕೆಗಾಗಿ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 29.01.2024 ರಂದು ಸಂಜೆ 6.30 ಗಂಟೆಗೆ ಆರೋಪಿಗಳು ನಿಮಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸಾಕ್ಷಿ ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ದೊಣ್ಣೆ ಮತ್ತು ರಾಡನ್ನು ತೋರಿಸಲಾಗಿ

ಸದರಿ ದೊಣ್ಣೆ ಮತ್ತು ರಾಡಿನಿಂದಲೇ ಆರೋಪಿಗಳು ನಿಮಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಹಲ್ಲೆ ಮಾಡಿರುತ್ತಾರೆ ಆದರೆ ಇದೇ ದೊಣ್ಣೆ ಮತ್ತು ರಾಡು ಎಂದು ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳಿಕೆ ಕೊಟ್ಟ ನಂತರ ದಿನಾಂಕ 02.02.2024 ರಂದು ಪೋಲಿಸರು ಘಟನಾ ಸ್ಥ,ಳಕ್ಕೆ ಬಂದು ಬೆಳಿಗ್ಗೆ 11.00 ಗಂಟೆಯಿಂದ 11.30 ಗಂಟೆಯವರೆಗೆ ಮಹಜರನ್ನು ಜರುಗಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ಈಗ ನ್ಯಾಯಾಲಯದಲ್ಲಿ ಇರುವ ದೊಣ್ಣೆ ಮತ್ತು ರಾಡನ್ನು ಸೀಜ್ ಮಾಡಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಸಿ ಕೆ.ಆರ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ದೊಣ್ಣೆ ಮತ್ತು ರಾಡನ್ನು ನೀವು ಇವತ್ತೆ ಮೊದಲು ನ್ಯಾಯಾಲಯದಲ್ಲಿ ನೋಡುತ್ತಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಏನು ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಏನು ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿ ಸಂಬಂಧಿಕರು ಎಂದು ನುಡಿಯುತ್ತಾರೆ. ಚಿಕ್ಕರಂಗಯ್ಯ ಮತ್ತು ಬಜ್ಜಯ್ಯ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಿಕ್ಕರಂಗಯ್ಯ ರವರ ಮಗ ಮುದ್ದರಂಗಯ್ಯ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮುದ್ದರಂಗಯ್ಯ 1 ನೇ ಆರೋಪಿಯ ಯಜಮಾನರು ಹಾಗೂ 2 ನೇ ಆರೋಪಿಯ ತಂದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಿಕ್ಕರಂಗಯ್ಯ ರವರ ಅಣ್ಣ ಬಜ್ಜಯ್ಯ ನಿಮ್ಮ ಮಾವ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಚಿಕ್ಕರಂಗಯ್ಯ ಮತ್ತು ಬಜ್ಜಯ್ಯ ರವರ ಕುಟುಂಬಕ್ಕೂ ಸುಮಾರು 40-45 ವರ್ಷಗಳಿಂದ ಮನಸ್ತಾಪ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸುಮಾರು 40-45 ವರ್ಷಗಳಿಂದ ನಿಮ್ಮ ಮತ್ತು ಆರೋಪಿಗಳ ಕುಟುಂಬಕ್ಕೂ ಮಾತುಕತೆ ಇಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಗಳ ಮನೆ

ಜಂಟಿಯಾಗಿ ಇದ್ದು ಅಕ್ಕ ಪಕ್ಕ ಇರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮನೆ ವಿಚಾರ ಸಂಬಂಧವು ನಿಮ್ಮ ಮತ್ತು ಆರೋಪಿಗಳ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳಿಗೆ ಸಂಬಂಧಪಟ್ಟಂತೆ ನೀಲಗಿರಿ ಮರ ಇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 2015 ರಲ್ಲಿ ಸದರಿ ನೀಲಗಿರಿ ಮರಗಳಿಗೆ ಬೆಂಕಿ ಬಿದ್ದ ಬಗ್ಗೆ ನಿಮ್ಮ ವಿರುದ್ದ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆ ವಿಚಾರದಲ್ಲೂ ನಿಮ್ಮ ಮತ್ತು ಆರೋಪಿಗಳ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ ಮೊದಲಿನಿಂದಲೂ ಮಾತುಕತೆ ಇರುವುದಿಲ್ಲ ಆದರೆ ಬೆಂಕಿ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

1ನೇ ಆರೋಪಿಯ ಬಲಗೈ ಅಂಗವಿಕಲ ಇದ್ದು ಏನೂ ಕೆಲಸ ಮಾಡಲು ಆಗುವುದಿಲ್ಲ ಹಾಗೂ ಎತ್ತಲೂ ಆಗುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1ನೇ ಆರೋಪಿಯು ಏನೇ ಕೆಲಸ ಮಾಡಬೇಕಾದರೂ ಆಳುಗಳಿಂದ ಮಾಡಿಸುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 2, 3 ಮತುತ 5 ಹಾಗೂ ನೀವು ವಿಶ್ವಾಸದಿಂದ ಚೆನ್ನಾಗಿ ಇದ್ದೀರಿ ಎಂದರೆ ಸಾಕ್ಷಿ ಹಾಗೇನೂ ಇಲ್ಲ ಮಾತನಾಡಿಸುತ್ತೇವೆ ಎಂದು ನುಡಿಯುತ್ತಾರೆ. ಚಾಸಾ 2 ಮತ್ತು 3 ರವರು ಗಲಾಟೆಯಾದ ಎಷ್ಟು ಗಂಟೆಗೆ ಬಂದಿರುತ್ತಾರೆ ಎಂದರೆ ಸಾಕ್ಷಿ ಅರ್ಧ ಗಂಟೆಗೆ ಎಂದು ನುಡಿಯುತ್ತಾರೆ. ಚಾಸಾ 4 ರವರು ನಿಮ್ಮ ಮಗ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಂಜೆ 6.30 ಗಂಟೆ ಸಮಯದಲ್ಲಿ ಕತ್ತಲು ಇತ್ತು ಎಂದರೆ ಸಾಕ್ಷಿ ಇಲ್ಲ ಇನೂನ ಬೆಳಕು ಇತ್ತು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು 5.45 ಗಂಟೆಗೆ ಎಂದು ನುಡಿಯುತ್ತಾರೆ. 1ನೇ ಆರೋಪಿಯು ಎಲ್ಲಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೊಟ್ಟೆ ಮೇಲೆ ಎಂದು ನುಡಿಯುತ್ತಾರೆ. 2 ನೇ ಆರೋಪಿಯು ಎಲ್ಲಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಬೆನ್ನಿಗೆ ಎಂದು ನುಡಿಯುತ್ತಾರೆ. ಹಲ್ಲೆ ಮಾಡಿರುತ್ತಾರೆ ಎಂದು ಹೇಳಿದ್ದು ರಕ್ತ ಏನಾದರೂ ಬಂದಿತ್ತ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹಲ್ಲೆ ಮಾಡಿದಾಗ

ನೀವು ಕೆಳಗೆ ಬಿದ್ದಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರಜ್ಞೆ ಹೋಗಿತ್ತ ಎಂದರೆ ಸಾಕ್ಷಿ 5 ನಿಮಿಷ ಪ್ರಜ್ಞೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಗಲಾಟೆ ಆಗಿರುತ್ತದೆ ಎಂದು ಹೇಳಿದ್ದು ಬಸವರಾಜು ಸ್ಥ,ಳದಲ್ಲಿ ಇದ್ದಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹೇಳಿಕೆಯನ್ನು ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಊರಿನಲ್ಲಿ ಎಂದು ನುಡಿಯುತ್ತಾರೆ. ಊರಿನಲ್ಲಿ ಪಡೆದ ಹೇಳಿಕೆಯಲ್ಲಿ ನಾನು ಕೆಳಗೆ ಬಿದ್ದಿರುತ್ತೇನೆ ಹಾಗೂ ನನಗೆ ಕಪಾಳಕ್ಕೆ ಹೊಡೆದಿರುತ್ತಾರೆ ಮತ್ತು ನನಗೆ 5 ನಿಮಿಷ ಪ್ರಜ್ಞೆ ಇದ್ದಿರಲಿಲ್ಲ ಎಂದು ಹೇಳಿ ಬರೆಸಿರುತ್ತೀರಾ ಎಂದರೆ ಸಾಕ್ಷಿ ಹೇಳಿರುತ್ತೇನೆ ಆದರೆ ಬರೆದಿರುತ್ತಾರೋ ಇಲ್ಲವೋ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಚಾಸಾ 4 ರವರು ಎಷ್ಟು ಗಂಟೆಗೆ ಬಂದಿರುತ್ತಾರೆ ಎಂದರೆ ಸಾಕ್ಷಿ 9.30 ಅಥವಾ 10.00 ಗಂಟೆಗೆ ಎಂದು ನುಡಿಯುತ್ತಾರೆ. ಚಾಸಾ 4 ರವರು ಬಂದ ತಕ್ಷಣ ಆಸ್ಪತ್ರೆಗೆ ಬಂದಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆಸ್ಪತ್ರೆಯಲ್ಲಿ ಎಷ್ಟು ಗಂಟೆಗೆ ಚಿಕಿತ್ಸೆ ಪಡೆದಿರುತ್ತೀರಿ ಎಂದರೆ ಸಾಕ್ಷಿ 10.30 ಅಥವಾ 11.00 ಗಂಟೆಗೆ ಎಂದು ನುಡಿಯುತ್ತಾರೆ. ಹೇಳಿಕೆಯಲ್ಲಿ ಏನು ಬರೆದಿದೆ ಎಂದು ಪೋಲೀಸರು ಓದಿ ತಿಳಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ಎಷ್ಟು ದಿವಸಗಳ ಕಾಲ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿರುತ್ತೀರಿ ಎಂದರೆ ಸಾಕ್ಷಿ 5 ದಿವಸ ಎಂದು ನುಡಿಯುತ್ತಾರೆ. 5 ದಿನಗಳ ನಂತರ ಡಿಸ್ಚಾರ್ಜ್ ಆಗಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಡ್ಮಿಟ್ ಮತ್ತು ಡಿಸ್ಚಾರ್ಜ್ ಆದ ಬಗ್ಗೆ ದಾಖಲೆಗಳನ್ನು ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಪೋಲಿಸರಿಗೆ ಅಥವಾ ನ್ಯಾಯಾಲಯಕ್ಕಾಗಲಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ನಾನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಆರೋಪಿಗಳು ದೊಣ್ಣೆಯಿಂದ ಮತ್ತು ರಾಡಿನಿಂದ ಯಾವುದೇ ಹಲ್ಲೆ ಮಾಡಿರುವುದಿಲ್ಲ ನಿಮ್ಮ ಮತ್ತು ಆರೋಪಿಗಳ ವೈಮಷ್ಯದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಮಹಜರ್ ಗೆ ಬಂದಾಗ ಯಾರು ಯಾರು

ಇದ್ದರು ಎಂದರೆ ಸಾಕ್ಷಿ ಜಯಮ್ಮ ಮತ್ತು ರಂಗಯ್ಯ ಇದ್ದರು ಎಂದು ನುಡಿಯುತ್ತಾರೆ. ಚಾಸಾ 2 ಮತ್ತು 5 ರವರು ಮಹಜರ್ ಸಮಯದಲ್ಲಿ ಇದ್ದರ ಎಂದರೆ ಸಾಕ್ಷಿ ಇದ್ದರು ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಯಾರು ಯಾರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು, ಚಾಸಾ 2 ಮತ್ತು 5 ರವರು ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಏನು ಬರೆದಿದೆ ಎಂದು ಪೋಲಿಸರು ಓದಿ ತಿಳಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಸ್ದಳದ ಚೆಕ್ಕುಬಂಧಿ ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಯಾವುದೇ ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ ಪೋಲಿಸ್ ಠಾಣೆಯಲ್ಲೆ ಮಹಜರನ್ನು ಬರೆದಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿ ಮತ್ತು ನಿಮ್ಮ ನಡುವೆ ಸುಮಾರು 40-50 ವರ್ಷಗಳಿಂದ ವೈಮನಸ್ಸು ಇರುವುದರಿಂದ ಆರೋಪಿಗಳಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 1868/ 2024**

**ಚಾಸಾ ಃ- 05 / ಪ್ರಾಸಾ ಃ- 02**

| | |
|---|---|
| ಹೆಸರು | ಮರಿಯಮ್ಮ |
| ಗಂಡನ ಹೆಸರು | ಗಂಗರಾಮಯ್ಯ |
| ವಯಸ್ಸು | 70 |
| ಉದ್ಯೋಗ | ವ್ಯವಸಾಯ |
| ವಿಳಾಸ | ದಂಡಿಗೆಪುರ |

**ದಿನಾಂಕಃ 06.09.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 1 ರಿಂದ 4 ರವರು ಪರಿಚಯ ಇರುತ್ತಾರೆ. ಆರೋಪಿಗಳು ಪರಿಚಯ ಇರುತ್ತಾರೆ. ಈಗ ಸಾಕ್ಷಿಗೆ ನಿಪಿ-2 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ ಸದರಿ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಚಾಸಾ 1 ಮತ್ತು ಆರೋಪಿಗಳ ನಡುವೆ ಆದ ಗಲಾಟೆ ಸಂಬಂಧ ಪೋಲಿಸರು ಮಹಜರ್ ಗೆ ಬಂದಾಗ ಸದರಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಮಹಜರ್ ಸಮಯದಲ್ಲಿ ದೊಣ್ಣೆ ಮತ್ತು ರಾಡನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಸದರಿ ದೊಣ್ಣೆ ಮತ್ತು ರಾಡನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ನ್ಯಾಯಾಲಯದಲ್ಲಿರುವ ದೊಣ್ಣೆ ಮತ್ತು ರಾಡನ್ನು ತೋರಿಸಲಾಗಿ ಸಾಕ್ಷಿ ಸದರಿ ದೊಣ್ಣೆ ಮತ್ತು ರಾಡನ್ನು ಗುರುತಿಸಿದ್ದು ದೊಣ್ಣೆಯನ್ನು ಮುದ್ದೆಮಾಲು 1 ಎಂದು ಹಾಗೂ ರಾಡನ್ನು ಮುದ್ದೆಮಾಲು 2 ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಚಾಸಾ 3 ರವರು ಮತ್ತು ನಾನು ಇದ್ದೆವು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮ ನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 02.02.2024 ರಂದು ಪೋಲಿಸರು ಘಟನಾ ಸ್ಥ,ಳಕ್ಕೆ ಬಂದು ಬೆಳಿಗ್ಗೆ 11.00 ಗಂಟೆಯಿಂದ 11.30 ಗಂಟೆಯವರೆಗೆ ಮಹಜರನ್ನು ಜರುಗಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ನೀವು, ಚಾಸಾ 1 ಮತ್ತು 2 ರವರು ಹಾಜರು ಇದ್ದಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ವಾಟೀ ಸವಾಲು** ಃ- **ಶ್ರೀ. ಸಿ ಕೆ.ಆರ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಏನು ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಏನು ಇಲ್ಲ ಎಂದು ನುಡಿಯುತ್ತಾರೆ. ದಿನಾಂಕವನ್ನು ನಿಮಗೆ ಚಾಸಾ 1 ರವರು ಹೇಳಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಮತ್ತು 2 ಅನ್ನು ಇದೇ ಮೊದಲ ಭಾರಿಗೆ ನೀವು ನ್ಯಾಯಾಲಯದಲ್ಲಿ ನೋಡುತ್ತಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸಸರು ಎಲ್ಲಿಗೆ ಹಾಗೂ ಎಷ್ಟು ಗಂಟೆಗೆ ಬಂದಿದ್ದರು ಎಂದರೆ ಸಾಕ್ಷಿ ಬೆಳಿಗ್ಗೆ 9.00 ಗಂಟೆಗೆ ಊರಿಗೆ ಬಂದಿದ್ದರು ಎಂದು ನುಡಿಯುತ್ತಾರೆ. ಪೋಲಿಸರು ಬಂದಾಗ ಎಷ್ಟು ಜನರು ಇದ್ದರು ಎಂದರೆ ಸಾಕ್ಷಿ 7-8 ಜನ ಇದ್ದರು ಆದರೆ ಯಾರೂ ಸಾಕ್ಷಿಗೆ ಬರಲಿಲ್ಲ ಎಂದು ನುಡಿಯುತ್ತಾರೆ. ಸದರಿ 7-8 ಜನರ ಹೆಸರು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರನ್ನು 9.00 ಗಂಟೆಗಯಿಂದ 9.30 ಗಂಟೆಯವೆರೆಗ ಜರುಗಿಸಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸರು ನಿಮ್ಮ ಸಮಕ್ಷಮ ಏನಾದರೂ ಬರೆದುಕೊಂಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮನ್ನು ಹೊರತು ಪಡಿಸಿ ಬೇರೆ ಯಾರು ಸಹಿ

ಮಾಡಿರುತ್ತಾರೆ ಎಂದರೆ ಸಾಕ್ಷಿ ಚಾಸಾ 2 ರವರು ಎಂದು ನುಡಿಯುತ್ತಾರೆ. ನೀವು ಮತ್ತು ಚಾಸಾ 1ರವರು ವಿಶ್ವಾಸದಿಂದ ಚೆನ್ನಾಗಿ ಇದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸರು ಯಾವುದೇ ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ಮಹಜರನ್ನು ಜರುಗಿಸಿರುವುದಿಲ್ಲ, ನೀವು ಮತ್ತು ಚಾಸಾ 1ರವರು ವಿಶ್ವಾಸದಿಂದ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಸ್ಥಳದ ಚೆಕ್ಕುಬಂಧಿ ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಯಾವುದೇ ದೊಣ್ಣೆ ಮತ್ತು ಕಬ್ಬಿಣದ ರಾಡನ್ನು ತಂದಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**